**ಅಂಧರ ಉಚಿತ ಬಸ್ ಪಾಸ್:**

ಪೂರ್ಣ ಪ್ರಮಾಣದ ಅಂಧರಿಗೆ ರಾಜ್ಯಾದ್ಯಂತ ಸಂಸ್ಥೆಯ ಸಾಮಾನ್ಯ/ವೇಗದೂತ ಸಾರಿಗೆಗಳಲ್ಲಿ ಉಚಿತವಾಗಿ ಪ್ರಯಾಣಿಸಲು ಬಸ್ ಪಾಸ್‌ಗಳನ್ನು ವಿತರಿಸಲಾಗುತ್ತಿದೆ. ಸದರಿ ಬಸ್ ಪಾಸಗಳ ಅವಧಿ 5 ವರ್ಷದ್ದಾಗಿರುತ್ತದೆ. ನಂತರ ಸದರಿ ಪಾಸಗಳನ್ನು ನವೀಕರಿಸಿಕೊಳ್ಳಲು ಅವಕಾಶ ಕಲ್ಪಿಸಲಾಗಿರುತ್ತದೆ.

ಸದರಿ ಉಚಿತ ಪಾಸ್‌ಗಳನ್ನು ಪಡೆಯಲು ಅರ್ಹ ಫಲಾನುಭವಿಗಳು ಈ ಕೆಳಕಂಡ ಯಾವುದಾದರು ಒಂದು ಪ್ರಾಧಿಕಾರಿಗಳಿಂದ ಗುರುತಿಸಲ್ಪಟ್ಟ ವಿಕಲಚೇತನರಿಗೆ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳ ಸಹಿ ಹಾಗೂ ಮೊಹರಿನೊಂದಿಗೆ ಇಲಾಖೆಯಿಂದ(ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ) ಒದಗಿಸುತ್ತಿರುವ ವಿಕಲಚೇತನರ ಗುರುತಿನ ಚೀಟಿಯನ್ನು ಹಾಜರುಪಡಿಸಿ ಬಸ್ ಪಾಸುಗಳನ್ನು ಪಡೆಯಬಹುದಾಗಿರುತ್ತದೆ. ವೈದ್ಯಕೀಯ ಪ್ರಮಾಣ ಪತ್ರ ಪಡೆಯುವ ಪ್ರಾಧಿಕಾರಗಳ ವಿವರ ಈ ಕೆಳಗಿನಂತಿವೆ.

a) ಪ್ರಾಥಮಿಕ ಆರೋಗ್ಯ ಕೇಂದ್ರದ ಆಡಳಿತ ವೈದ್ಯಾಧಿಕಾರಿಗಳನ್ನೊಳಗೊಂಡ ಏಕಸದಸ್ಯ.
b) ತಾಲೂಕು ಆಸ್ಪತ್ರೆ ಆಡಳಿತ ವೈದ್ಯಾಧಿಕಾರಿಗಳು, ಸಂಬಂಧಪಟ್ಟ ತಜ್ಞರು ಹಾಗೂ ಫಿಜಿಷಿಯನ್‌ರನ್ನೊಳಗೊಂಡ ಬಹುಸದಸ್ಯ.
c) ಜಿಲ್ಲಾ ಆಸ್ಪತ್ರೆಯ ಅಧೀಕ್ಷಕರು, ವೈಧ್ಯಕೀಯ ಮಾಹಾವಿದ್ಯಾಲಯ ಆಸ್ಪತ್ರೆ ಮುಖ್ಯಸ್ಥರು, ಸಂಭಂಧಪಟ್ಟ ತಜ್ಞರು ಹಾಗೂ ಫಿಜಿಷಿಯನ್‌ರನ್ನೊಳಗೊಂಡ ಬಹುಸದಸ್ಯ ಹಾಗೂ ಬೆಂಗಳೂರು ವೈದ್ಯಕೀಯ ಪ್ರಾಧಿಕಾರ.